ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ

**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101

**RaithaBhavana, General Cariappa Circle, Gadag – 582 101**

**E-mail: ksrdpruadmissions@gmail.com Phone: 08372-230338, Fax: 08372-297343**


Celebration of *Mahatma Gandhiji* and *Lal Bahadur Shashtriji* Jayanti at KSRDPR University Campus is published in "Navodaya" kannada News Paper. Published Date: 03/10/2020

# ವಿಶ್ವವಿದ್ಯಾಲಯದಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲಬಹದ್ದೂರ್ ಶಾಸ್ತ್ರೀಜಿ ಅವರ ಜಯಂತಿ ಆಚರಣೆ



ಗದಗ, ಅ. 2. ವಿಶ್ವವಿದ್ಯಾಲಯದಿಂದ ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಪಟ್ಟ ಕೃತಿಯನ್ನು ಬಿಡುಗಡೆಗೊಳಿಸಿದ್ದು ಬಹಳ ಅರ್ಥಪೂರ್ಣವಾಗಿದೆ. ಮಹಾತ್ಮಾ ಗಾಂಧೀಜಿಯವರ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಯವರ ಧೀಮಂತ ವ್ಯಕ್ತಿತ್ವವನ್ನು ಬೇರೆಯವರು ಹೊಂದಲು ಸಾಧ್ಯವಿಲ್ಲ, ಅವರ ವ್ಯಕ್ತಿತ್ವ ಮತ್ತು ಆದರ್ಶಗಳನ್ನು ಪಾಲಿಸುವುದಷ್ಟೇ ನಮ್ಮ ಆದ್ಯ ಕರ್ತವ್ಯವಾಗಬೇಕು. ಪ್ರಸ್ತುತ ಮತ್ತು ಮುಂದಿನ ಪೀಳಿಗೆಗೆ ಆದರ್ಶವಾಗುವ ಎಲ್ಲಾ ಚಿಂತನೆಗಳು ಮಹಾತ್ಮ ಗಾಂಧೀಜಿಯವರ ವಿಚಾರ ದೃಷ್ಟಿಕೋನದಲ್ಲಿ ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಗತಿಶೀಲ ಕಲಿಕೆಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಮೂಲಕ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಹಾಗೂ ಪ್ರಾಧ್ಯಾಪಕರುಗಳಿಗೆ ಜ್ಞಾನವನ್ನು ವೃದ್ಧಿಸಿಕೊಳ್ಳುವ ಹಲವು ರೀತಿಯ ಅವಕಾಶಗಳನ್ನು ನೀಡಲಿದೆ ಎಂದು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ವಿಷ್ಣುಕಾಂತ ಎಸ್. ಚಟಪಲ್ಲಿ ಹೇಳಿದರು.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಮಹಾತ್ಮಾ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸುವ ಮೂಲಕ ಈ ಮಹಾತ್ಮರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಮಾದರಿ ಸಸ್ಯ ಶಿಶುಪಾಲನಾ ಕೇಂದ್ರದ ಯಶಸ್ವಿ 100 ದಿನದ ವರದಿಯನ್ನು ಮಂಡಿಸಲಾಯಿತು ಹಾಗೂ ಗ್ರಂಥಾಲಯದ ಸೆಪ್ಟಂಬರ್ ಮಾಸದ ಇನ್ಫೋಗ್ರಾಫಿಕ್ ಪಟ್ಟಿ ಮತ್ತು ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದಿಂದ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಆಯಾಮಗಳು, ಸಂಪುಟ-1 ಪಂಚಾಯತ್ ರಾಜ್ ವ್ಯವಸ್ಥೆಯು ನಡೆದು ಬಂದ ದಾರಿ ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ. ಅಬ್ದುಲ್ ಅಜೀಜ್ ಮುಲ್ಲಾ ಅವರು ಈ ಮಹತ್ವದ ಕಾರ್ಯಕ್ರಮದ ಸ್ಮರಣೆಗಾಗಿ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕೃತಿಯನ್ನು ಹೊರತಂದಿರುವುದು ಸಂತಸವನ್ನುಂಟು ಮಾಡಿದೆ. ಇದಕ್ಕೆ ಪ್ರೇರಣೆ ನೀಡಿದ ಗೌರನ್ವಿತರಿಗೆ ಹಾಗೂ ಸಂಪಾದಕೀಯ ಮಂಡಳಿಗೆ ವಂದನೆಗಳು ಎಂದು ಹೇಳಿದರು.

ಮುಖ್ಯ ಅತಿಥಿ ಜೆ.ಸಿ. ತಲ್ಲೂರ ನಿವೃತ್ತ ಕಾರ್ಯದರ್ಶಿಗಳು ಲೋಕೋಪಯೋಗಿ ಇಲಾಖೆ ಹಾಗೂ ನಿವೃತ್ತ ಸದಸ್ಯರು ಕರ್ನಾಟಕ ಪರಿಸರ ಮೇಲ್ಮನವಿ ಪ್ರಾಧಿಕಾರ, ಧಾರವಾಡ ಇವರು ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ, ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರವು ಕೇವಲ ಮೂರು ವಾರದಲ್ಲಿ ಪುಸ್ತಕ ರಚಿಸಿ ಜಾರಿಗೆ ತಂದಿದ್ದು ಶ್ಲಾಘನೀಯ, ಈ ಕೃತಿಯು ವಿಶ್ವವಿದ್ಯಾಲಯದ ಆಗಮ ಘೋಷ ಪತ್ರದಂತೆ ಇದೆ. ಮುಂದೆ ಹಲವು ಸಂಪುಟಗಳ ರಚನೆಗೆ ಈ ಕೃತಿಯು ಮಾರ್ಗದರ್ಶಿಯಾಗಲಿ ಎಂದರು. ಮುಂದುವರೆದು ಗಾಂಧೀಜಿಯವರ ತತ್ವ, ಚಿಂತನೆ ಮತ್ತು ಆದರ್ಶಗಳಿಗೆ ಸಂಬಂಧಿಸಿದಂತೆ ಹಲವು ಮಹಾನ್ ಕೃತಿಗಳು ಇದ್ದು, ಅವುಗಳು ಮಾನವ ಜೀವನ ಸ್ವರೂಪವನ್ನೇ ಬದಲಿಸುವಂತೆ ಇವೆ. ಅಂತಹ ಕೃತಿಗಳನ್ನು ಸ್ವಾಧ್ಯಾಯ ಮಾಡುವ ಹವ್ಯಾಸವನ್ನು ಪ್ರಾಧ್ಯಪಕರು ಸೇರಿದಂತೆ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ವಿಶ್ವವಿದ್ಯಾಲಯವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಪಟ್ಟಂತೆ ವಿಶಾಲವಾದ ಕಾರ್ಯಕ್ಷೇತ್ರವನ್ನು ಹೊಂದಿದ್ದು ಈ ಹಿನ್ನೆಲೆಯ ಆಧರಿತವಾಗಿ ಮಹಾನ್ ಸಾಧನೆಗಳು ವಿಶ್ವವಿದ್ಯಾಲಯದಿಂದ ಆಗಲೆಂದು ಹಾರೈಸಿದರು.

ಶ್ರೀ. ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಧಾರವಾಡ. ಇದರ ನಿರ್ದೇಶಕರಾದ ಡಾ. ಪ್ರಕಾಶ ಭಟ್ ಅವರು ಮಾತನಾಡಿ ಗಾಂಧೀಜಿ ಅವರ ಸ್ವರಾಜ್ ಪರಿಕಲ್ಪನೆಯು ಜನರ ಸ್ವಯಂ ಅಭಿವೃದ್ಧಿ ಹಾಗೂ ಆಡಳಿತದಲ್ಲಿ ಜನರ ಸಮಗ್ರ ಸಹಭಾಗಿತ್ವಕ್ಕೆ ಸಂಬಂದಪಟ್ಟಂತೆ ಹೆಚ್ಚು ಮಹತ್ತರವಾದ ಪರಿಕಲ್ಪನೆಯಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ದೇಶದ ಆಡಳಿತ ಶ್ರೇಣಿಯಲ್ಲಿನ ಕೆಳಹಂತದ ಬದಲಾಗಿ ಮೇಲು ಹಂತದ ವ್ಯವಸ್ಥೆ ಎಂದು ಕಂಡುಕೊಳ್ಳಬೇಕು. ಈ ವ್ಯವಸ್ಥೆಯ ಕುರಿತು ಅಧ್ಯಯನ ಮಾಡುವ ಹಾಗೂ ಅಜ್ಞಾನವನ್ನು ಅಳಿಸಿ ಹಾಕುವ ಬದಲಾವಣೆಗಳು ನಮ್ಮಿಂದ ಆಗಬೇಕೆಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ಸ್ವಾಗತಿಸಿದರು.

ಸಮಾಜ ಕಾರ್ಯ ವಿಭಾಗದ ಸಂಯೋಜಕರಾದ ಡಾ. ಗೀತಾ ಎನ್. ಬಂಗಾರಿ ಕಾರ್ಯಕ್ರಮ ನಿರೂಪಿಸಿದರು.